ಕ್ರ.ಸಂ.	ಕಾರ್ಯಕ್ರಮಗಳ ವಿವರ (ಉದ್ದೇಶ)	ಮೊತ್ತ (ರೂ.ಗಳಲ್ಲಿ)
1	ಸಾಂಸ್ಕೃತಿ ಸೌರಭ, ಯುವಸೌರಭ, ಚಿಗುರು, ಕಾರ್ಯ ಕ್ರಮದಲ್ಲಿ ಭಾಗವಹಿಸಿದ ಕಲಾವಿದರ ಪ್ರಯಾಣ ವೆಚ್ಚ	3,80,000–00
2	ಸಂಘ–ಸಂಸ್ಥೆಗಳಿಗೆ ಧನಸಹಾಯ	4,50,000–00
3	ಸ್ಥಳೀಯ ಪ್ರಾಯೋಜಿತ ಕಾರ್ಯಕ್ರಮ ಪ್ರಾಯೋಜನೆ	6,40,000–00
4	ಆಡಳಿತ ಕನ್ನಡ ಕಾರ್ಯಶಿಬಿರ, ಕನ್ನಡ ಕಲಿಕೆ, ಆಡಳಿತ ಭಾಷಾ ಕಮ್ಮಟ, ಗಡಿ ಜಾಗೃತಿ ಪ್ರದೇಶಗಳಲ್ಲಿ ಕನ್ನಡ ಜಾಗೃತಿ ಸಮಾವೇಶ ಕಾರ್ಯಕ್ರಮ	1,30,000–00
5	ಸ್ವಾತಂತ್ರ್ಯ ದಿನಾಚರಣೆ ಗಣರಾಜ್ಯೋತ್ಸವ ದಿನಾಚರಣೆ ಮತ್ತು ಗುರುಶಿಷ್ಯ ಪರಂಪರೆ ಘೋಷಣೆ	1,40,000–00
6	ವಿಶೇಷ ಘಟಕ ಯೋಜನೆಯಡಿ ಕಾರ್ಯಕ್ರಮ ಪ್ರಾಯೋಜನೆ	10,25,000–00
7	ಗಿರಿಜನ ಉಪಯೋಜನೆಯಡಿ ಕಾರ್ಯಕ್ರಮ ಪ್ರಾಯೋಜನೆ	4,45,000–00
8	ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಗೆ ಸಿಬ್ಬಂದಿ ವೇತನ ಹಾಗೂ ವಾರ್ಷಿಕ ಕಾರ್ಯಚಟುವಟಿಕೆಗಳಿಗೆ ಒಟ್ಟಾರೆಯಾಗಿ	90,21,598–00
9	ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು ಇವರಿಗೆ ಸಿಬ್ಬಂದಿ ವೇತನ ಹಾಗೂ ವಾರ್ಷಿಕ ಕಾರ್ಯ ಚಟುವಟಿಕೆಗಳಿಗೆ ಒಟ್ಟಾರೆಯಾಗಿ	35,00,000–00
10	ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾ. ಬಿಡ್ಡಡ್ಕ ಅಲ್ಲೆಟ್ಟಿ ಸಾಂಸ್ಕೃತಿಕ ಭವನ ನಿರ್ಮಾಣಕ್ಕಾಗಿ	3,00,000–00
11	ಕನಕ ಜಯಂತಿ ಆಚರಣೆಗಾಗಿ	70,000–00
12	ತುಳು ಸಾಹಿತ್ಯ ಸಮ್ಮೇಳನ ನಡೆಸಲು ಜಿಲ್ಲಾಧಿಕಾರಿಗಳು ಮಂಗಳೂರು ಇವರಿಗೆ ಹಣ ಬಿಡುಗಡೆ	1,00,00,000–00
	ಒಟ್ಟು ಮೊತ್ತ	**2,61,01,598–00**

ಕುಡಿಯುವ ನೀರಿನ ಯೋಜನೆ

399 (411) ಶ್ರೀ ವೆಂಕಟಸ್ವಾಮಿ (ದೇವನಹಳ್ಳಿ):– ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದೇವನಹಳ್ಳಿ ತಾಲ್ಲೂಕು, ವಿಜಯಪುರ ಪುರಸಭೆ, ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆಗೆ (ಯು.ಐ.ಡಿ.ಎಸ್.ಎಸ್.ಎಂ.ಟಿ) ಆದೇಶ ನಂ: ಎಎ.ವೈಡ್.ನಂ: ಜಿ.ಓ.ನಂ: ಯುಡಿಡಿ–01 ಐಎಸ್‌ಟಿ 2008, ದಿನಾಂಕ: 1–01–2008 ರಂದು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಮಂಜೂರಾಗಿರುವ ರೂ. 1109.62 ಲಕ್ಷ ವೆಚ್ಚದ ಕಾಮಗಾರಿ ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಇ) ಈ ವರ್ಷದಲ್ಲಿಯೇ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದೇ?

ಶ್ರಿ ಬಾಲಚಂದ್ರ ಜಾರಕಿಹೊಳಿ:– (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು)

ಅ) ವಿಜಯಪುರ ಪುರಸಭೆಗೆ UIDSSMTಯೋಜನೆಯಡಿಯಲ್ಲಿ ರೂ.1109.62 ಲಕ್ಷದ ನೀರು ಸರಬರಾಜು ಯೋಜನೆಯು 2007–08 ರಲ್ಲಿ ಭಾರತ ಸರ್ಕಾರದಿಂದ ಮಂಜೂರಾಗಿರುತ್ತದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಈ ಯೋಜನೆಯನ್ನು ಅನುಷ್ಠಾನಿಸಲು ನೀಡಿದ್ದು ಮೊದಲನೆ ಕಂತಿನ ಅನುದಾನವನ್ನು ಮಂಡಳಿಗೆ ಬಿಡುಗಡೆ ಮಾಡಲಾಗಿದೆ.

ಆದರೆ ಈ ಯೋಜನೆಗೆ ಯಾವುದೇ ನದಿ ಮೂಲ/ಭೂಮಿಯ ಮೇಲ್ಮಟ್ಟದ ಜಲಮೂಲ (Surface source) ಲಭ್ಯವಿಲ್ಲದಿರುವುದರಿಂದ ಕೇವಲ ಕೊಳವೆಬಾವಿ ಆಧಾರಿತ ಹಾಗೂ ಶಾಶ್ವತವಲ್ಲದ ಜಲಮೂಲದ ಈ ಯೋಜನೆಯ ಫಲಾದಾಯಿಕತ್ವದಲ್ಲಿ (Feasibility) ಸಂಶಯವಿರುವುದರಿಂದ, ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತಾದ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಉದ್ಯಾನವನ ನಿರ್ಮಾಣ ಮಾಡುವುದು